

ಝೀ ಕನ್ನಡದ ಸಾರೆಗಮಪ.. ದಲ್ಲಿ ಅರ್ಜುನ್ ಜನ್ಯ

ಮೂಲಕ ಜನರನ್ನು ತಲುಪಲು ಪ್ರಯತ್ನಿಸಿದ್ದಾರೆ. ಗಿರೀಶ ಕಾಸರವಳ್ಳಿ ಅವರಂಥ ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರು ಕೂಡ ಕಿರುತೆರೆ ಮಾಧ್ಯಮದಲ್ಲಿ ತೊಡಗಿಕೊಂಡಿರುವುದಿದೆ. ಕಾಸರವಳ್ಳಿ ನಿರ್ದೇಶನದ 'ಗೃಹಭಂಗ' ಕನ್ನಡದ ಕಿರುತೆರೆ ಸೃಷ್ಟಿಸಿದ ಕ್ಲಾಸಿಕ್‌ಗಳಲ್ಲೊಂದು.

ಸಿನಿಮಾಕ್ಕೆ ಹೋಲಿಸಿದರೆ ಕಿರುತೆರೆಯ ವಹಿವಾಟು ಹೆಚ್ಚು ನಿಖರ ಹಾಗೂ ಪಾರದರ್ಶಕವಾಗಿದೆ. 'ಒಂದು ಒಂದೂವರೆ ವರ್ಷ ಕೆಲಸ ಮಾಡಿದ ಸಿನಿಮಾ ತೆರೆಕಾಣುವವರೆಗೂ ಅದರ ಲಾಭ–ನಷ್ಟದ ಲೆಕ್ಕಾಚಾರ ಅಸ್ಪಷ್ಟವಾಗಿರುತ್ತದೆ. ಆದರೆ, ಕಿರುತೆರೆಯಲ್ಲಿ ಇಂಥ ಅಸ್ಪಷ್ಟತೆಗೆ ಅವಕಾಶವೇ ಇಲ್ಲ. ಕೆಲಸದ ಜೊತೆಗೇ ಸಂಭಾವನೆಯೂ ಸಂದಾಯವಾಗುತ್ತದೆ' ಎಂದು ನಿರ್ದೇಶಕಿ ಸುಮನ್ ಕಿತ್ತೂರ್ ಹೇಳುತ್ತಾರೆ. ಈ ಸ್ಪಷ್ಟತೆ–ಪಾರದರ್ಶಕತೆಯಿಂದಲೇ, ನೋಟು ಅಮಾನ್ಯೀಕರಣದ ಸಂದರ್ಭದಲ್ಲಿ ಚಿತ್ರರಂಗ ತತ್ತರಿಸಿದರೂ ಕಿರುತೆರೆಯಲ್ಲಿನ ಚಟುವಟಿಕೆಗಳಿಗೆ ಯಾವ ತೊಂದರೆಯೂ ಆಗಲಿಲ್ಲ.

ಎಂಬತ್ತೈದು ವರ್ಷಗಳ ನಂತರವೂ ಕನ್ನಡ ಚಿತ್ರರಂಗ ಅಸ್ಥಿರತೆಯಿಂದ ಹೊರಗೆ ಬರುವುದು ಸಾಧ್ಯವಾಗಿಲ್ಲ. ನಿರ್ಮಾಣದಲ್ಲಿ ಪಾರದರ್ಶಕತೆಯೂ ಇಲ್ಲ. ಇತ್ತೀಚಿನ ವರ್ಷಗಳಲ್ಲಂತೂ ವೃತ್ತಿಪರ ಸಿನಿಮಾ ನಿರ್ಮಾಣ ಸಂಸ್ಥೆಗಳು ಕೂಡ ಕಡಿಮೆಯಾಗುತ್ತಿವೆ. ಇಂಥ ಸಂದರ್ಭದಲ್ಲಿ ದೃಶ್ಯ ಮಾಧ್ಯಮದಲ್ಲಿ ಸ್ಪಷ್ಟ ಯಶಸ್ಸನ್ನು ಸಾಧಿಸಿರುವ ಕಿರುತೆರೆಯಿಂದ ಕನ್ನಡ ಸಿನಿಮಾ ಕಲಿಯಬೇಕಾದ ಪಾಠಗಳು ಸಾಕಷ್ಟಿವೆ.

